ಆಗಿಲ್ಲ. 1988-89 ರಲ್ಲಿ ಮೌಖಿಕವಾಗಿ ಪಾಲು ವಿಭಾಗವಾಗಿದೆ. ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ದಾವಾ ಅಸ್ತಿ ಈಗ ನಮ್ಮ ತಾಯಿಯವರ ಹೆಸರಿಲ್ಲಿದೆ.

2. ದಾವಾ ಅಸ್ತಿಯಲ್ಲಿ ವಾದಿಯರಿಗೆ ಸಮಭಾಗ ಇದೆ ಅಂದರೆ ಸಾಕ್ಷಿಯು ಭಾಗ ಈಗಾಗಲೇ ಕೊಟ್ಟಿದ್ದೇವೆ ಅನ್ನುತ್ತಾರೆ. ದಾವಾ ಅಸ್ತಿ ವಿಭಾಗದಲ್ಲಿ ನಮ್ಮ ಭಾಗಕ್ಕೆ ಬಂದಿದ್ದ ಮನೆ ವಾದಿಯರ ಭಾಗಕ್ಕೆ ಹೋಗಿದೆ. ವಾದಿಯರ ಭಾಗಕ್ಕೆ ಬಂದಿರುವ ಮನೆ ನಂ. 194 ಇರುತ್ತದೆ. ಅದರ ಉದ್ದ 60 ಅಡಿ ಅಗಲ 40 ಅಡಿ ಇರುತ್ತದೆ. ಸದರಿ ಅಸ್ತಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಹಿಂದೆ ಸದರಿ ಅಸ್ತಿ ನಮ್ಮ ಚಿಕ್ಕಮ್ಮ ಇವರ ಹೆಸರಿನಲ್ಲಿತ್ತು ಅವರು ಅದನ್ನು ಈಗ ಮಾರಾಟ ಮಾಡಿದ್ದಾರೆ. 1 ನೇ ವಾದಿ ಸದರಿ ಮನೆಯನ್ನು ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿದ್ದೇನೆ. ಸದರಿ ಮನೆ ವಿಭಾಗದಲ್ಲಿ 1 ನೇ ವಾದಿಗೆ ಮಾತ್ರ ಬಂದಿರುತ್ತದೆ.

3. ದೇವೆಂದ್ರಪ್ಪ ಇವರು 1994-95 ರಲ್ಲಿ ಮರಣ ಹೊಂದಿದ್ದಾರೆ ಆ ಸಮಯದಲ್ಲಿ ನಾನು ಚಿಕ್ಕವನಿದ್ದೆ. ನಿಡಿ 1 ದಾಖಲೆ ಏನು ಅಂದರೆ ಸಾಕ್ಷಿಯು ಅದು ಮನೆ ದಾಖಲೆ ಅನ್ನುತ್ತಾರೆ. ಅದು ಮನೆ ದಾಖಲೆ ಅಲ್ಲ ಅಂದರೆ ಸರಿಯಲ್ಲ. ನಿಡಿ 2 ದಾಖಲೆ ದೇವೆಂದ್ರಪ್ಪ ಇವರಿಗೆ ಕೊಟ್ಟ ಜನತಾಮನೆಯ ದಾಖಲೆ ಇರುತ್ತದೆ ಅಂದರೆ ಸರಿ, ಸಾಕ್ಷಿಯು ಮುಂದುವರೆದು ಅದು ಅವರ ಭಾಗಕ್ಕೆ ಹೋಗಿರುತ್ತದೆ ಅನ್ನುತ್ತಾರೆ. ಸದರಿ ಅಸ್ತಿ ಪ್ಲಾಟ ನಂ 131 ಇದು ವಾದಿಯರ ಭಾಗಕ್ಕೆ ಹೋಗಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ.

4. ಸರ್ವೆ ನಂ 362 ಬಿ4 ಹಾಗೂ 542 ಬಿ2 ಮತ್ತು 232 ಎ ಬಿ ಸಿ ಡಿ 5 ಎ ಈ ಅಸ್ತಿಗಳು ವಾದಿಯರಿಗೆ ಹೇಗೆ ಬಂತು ಅಂದರೆ ಸಾಕ್ಷಿಯು ಅವರು ಮನೆಯನ್ನು ಮಾರಿಕೊಂಡು ಸದರಿ ಅಸ್ತಿಗಳನ್ನು ಖರೀದಿಸಿದ್ದಾರೆ ಅನ್ನುತ್ತಾರೆ. ಅವರು ಸದರಿ ಮನೆಯನ್ನು 2017-18 ರಲ್ಲಿ 14 ಲಕ್ಷ ರೂಳಿಗೆ ಮಾರಾಟ ಮಾಡಿದ್ದಾರೆ. ಅವರು ಅದನ್ನು ರೇಣುಕಮ್ಮ ಗಂಡ ಸಿದ್ದಪ್ಪ ಇವರಿಗೆ ಮಾರಾಟ

ಮಾಡಿರುತ್ತಾರೆ. 14 ಲಕ್ಷ ರೂಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ.

5. ನಿಡಿ 6 ದಾಖಲೆ ಪಡೆಯಲು ಸಂಬಂದಿಸಿದ ಕಚೇರಿಗೆ ನಾನು ಅರ್ಜಿ ನೀಡಿದ್ದೆ. ಸದರಿ ದಾಖಲೆ ಯಾವ ವರ್ಷದ್ದು ಅಂದರೆ ಸಾಕ್ಷಿಯು 1981 ರದ್ದು ಎನ್ನುತ್ತಾರೆ. ಸದರಿ ನಿಡಿ 6 ರ ದಾಖಲೆಯ ಅಸ್ತಿಯ ವಿಸ್ತಿರ್ಣ 60*45 ಇರುತ್ತದೆ. ನಮ್ಮ ಕುಟುಂಬಕ್ಕೆ ಒಂದೇ ಪ್ಲಾಟು ಇರುತ್ತದೆ. ನಿಡಿ 6 ರ ಖಾತಾ ನಂ 154 ಈ ಅಸ್ತಿ ಬಸರಕೋಡು ಲಕ್ಕಪ್ಪ ಇವರಿಗೆ ಸರ್ಕಾರದಿಂದ ಬಂದ ಅಸ್ತಿ ಆಗಿರುತ್ತದೆ. ಸದರಿ ದಾಖಲೆಯಲ್ಲಿ ಅಸ್ತಿ ನಂಬರು ನಮೂದು ಇಲ್ಲ ಅಂದರೆ ಸರಿ. ಸದರಿ ಅಸ್ತಿಯ ವಿಸ್ತಿರ್ಣದ ಬಗ್ಗೆ ದಾಖಲೆ ಕೊಟ್ಟಿಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಲು ವಕೀಲರಿಗೆ ಮಾಹಿತಿ ನಮ್ಮ ಕುಟುಂಬದವರೆಲ್ಲರೂ ಸೇರಿ ಕೊಟ್ಟಿರುತ್ತೇವೆ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಮ್ಮ ಕುಟುಂಬದವರೆಲ್ಲರೂ ಸೇರಿ ಮಾಹಿತಿ ನೀಡಿರುತ್ತೆವೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ.

6. 1 ನೇ ವಾದಿಗೆ ಮದುವೆ ಸಮಯದಲ್ಲಿ 2 ತೊಲೆ ಬಂಗಾರವನ್ನು ನೀಡಿದ್ದು ಇರುತ್ತದೆ. ಅದರ ದಿನಾಂಕ ನನಗೆ ಹೇಳಲು ಬರುವುದಿಲ್ಲ. ನಾನು ಹೇಳಿದಂತೆ ವಾದಿಯರು ಅಸ್ತಿ ಮಾರಿಕೊಂಡು ಬೇರೆ ಅಸ್ತಿಗಳನ್ನು ಖರೀದಿಸಿರುತ್ತಾರೆ ಅನ್ನುವ ಬಗ್ಗೆ ಯಾವುದೇ ಪೂರಕ ದಾಖಲೆ ಇಲ್ಲ ಅಂದರೆ ಸರಿಯಲ್ಲ. ವಾದಿಯರು ತಮ್ಮ ಸ್ವಂತ ದುಡುಮೆಯಿಂದ ತಮ್ಮ ಹೆಸರಿಗೆ ಬೇರೆ ಜಮೀನುಗಳನ್ನು ಖರೀದಿ ಮಾಡಿಕೊಂಡಿರುತ್ತಾರೆ ಅಂದರೆ ಸುಳ್ಳು. ವಾದಿಯರಿಗೆ ದಾವಾ ಅಸ್ತಿಯಲ್ಲಿ ಸಮನಾದ ಹಕ್ಕು ಇದ್ದು ಅವರಿಗೆ ದಾವಾ ಅಸ್ತಿಯಲ್ಲಿ ಭಾಗಕೊಡಬೇಕಾಗುತ್ತದೆ ಅನ್ನುವ ಕಾರಣದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)
ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ